ಅ.ದಾ. ನಂ.206/2018

ಪಿಡಬ್ಲೂ ಃ 1

ಸಾಕ್ಷಿಯನ್ನು ಇಂದು ದಿನಾಂಕ:14-08-2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀಮತಿ ಬಿ ಜಿ ಎಮ್ ವಕೀಲರಿಂದ

1. ನಾವು ನಮ್ಮ ತಂದೆ ತಾಯಿ ಒಟ್ಟು 7 ಜನ ಮಕ್ಕಳು. ನನ್ನ ತಂದೆ ಮತ್ತು ತಾಯಿ ತೀರಿಕೊಂಡಿದ್ದು ನನ್ನ ತಂದೆ 2020 ರಲ್ಲಿ ಮತ್ತು ತಾಯಿ 2018 ರಲ್ಲಿ ತೀರಿಕೊಂಡಿರುತ್ತಾರೆ. ನಾವು 4 ಜನ ಗಂಡು ಮಕ್ಕಳು 3 ಜನ ಹೆಣ್ಣು ಮಕ್ಕಳು ಇರತ್ತೇವೆ. ನಾನು 2 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಸಹೋದರರು ನಂದಗೇರಿಯಲ್ಲಿ ಶಾಲೆ ಕಲಿತಿರುತ್ತಾರೆ. ನನ್ನ ತಮ್ಮ ಪರಶರುರಾಮ 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾನೆ. ನಮ್ಮ ಮನೆತನಕ್ಕೆ ಜಮೀನಗಳು ಇಲ್ಲ.

2. ನನ್ನ ತಂದೆ ತಾಯಿ ಚಿಕ್ಕಸಿಂದಗಿಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ನಿಜ. ಚಿಕ್ಕಸಿಂದಗಿಯಲ್ಲಿ ನಮ್ಮ ಮನೆತನದ ಒಂದು ಜಮೀನು ಇದೆ ಎಂದರೆ ಸರಿಯಲ್ಲ. ನಮ್ಮ 7 ಜನ ಪೈಕಿ ಎಲ್ಲರೂ ಚಿಕ್ಕಸಿಂದಗಿಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ನಾನು ಮಾತ್ರ ವಾಸವಾಗಿದ್ದೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ನಾನು ಖರೀದಿಸಿದ ಆಸ್ತಿಗಳಲ್ಲ ಸರ್ಕಾರದಿಂದ ಮಂಜೂರು ಮಾಡಿದ ಆಸ್ತಿಗಳು ಇರುತ್ತವೆ. ಎರಡು ಆಸ್ತಿಗಳ ಪೈಕಿ ಒಂದರಲ್ಲಿ ಮಾತ್ರ ಮನೆ ಕಟ್ಟಿರುತ್ತೇನೆ. ನಂದಗೇರಿ ಗ್ರಾಮದಲ್ಲಿ ನಾನು ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ಕೇವಲ ಕೆಲಸಕ್ಕಾಗಿ ಚಿಕ್ಕಸಿಂದಗಿಗೆ ಬಂದಿರುತ್ತೇನೆ ಎಂದು ಹೇಳುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ